ಅರಸಿ ಬಂದ ತಾಣ 'ರೆಡ್ ಲೈಟ್ ಡಿಸ್ಟ್ರಿಕ್ಟ್' ಸಿಕ್ಕೇಬಿಟ್ಟಿತು. ಅದೇ 'ಡಿ ವಾಲ್ಲೆನ್', ಅಂದರೆ ಡಚ್ ಭಾಷೆಯಲ್ಲಿ 'ಚಿಕ್ಕ ಗೋಡೆ' ಎಂದರ್ಥ. ಸುಮಾರು 300 ಕ್ಯಾಬಿನ್‌ಗಳನ್ನು ಸಾಲಾಗಿ ಕಟ್ಟಿ ಬಾಡಿಗೆಗೆ ಬಿಟ್ಟಿರುವ ಜಾಗ. ವೇಶ್ಯಾವಾಟಿಕೆಯನ್ನು ಒಂದು ವೃತ್ತಿಯನ್ನಾಗಿ ಪರಿಗಣಿಸಬೇಕೆಂದು ಸರ್ಕಾರದ ಆದೇಶ ಹೊಂದಿರುವ ಹಲವೇ ಪ್ರಾಂತ್ಯಗಳಲ್ಲಿ ಆಮ್‌ಸ್ಟರ್‌ಡ್ಯಾಂ ಕೂಡ ಒಂದು.

ಮೋಟು ಗೋಡೆ, ಕಿಟಕಿಗಳ ಸ್ಯಾಟಿನ್ ಪರದೆ, ಕೆಂಪು–ನೀಲಿ ದೀಪಗಳ ಹಿಂದೆ ಬೆಲೆವೆಣ್ಣುಗಳು ನಿಂತು ತಮ್ಮ ವ್ಯಾಪಾರ ಕುದುರಿಸಲು ಹಪಹಪಿಸುವ ದೃಶ್ಯ ಈಗಲೂ ಕಾಣಲು ಸಾಧ್ಯ. ಗಿರಾಕಿಗಳನ್ನು ಆಹ್ವಾನಿಸುವ ಮೂರು ಕೊಠಡಿಗಳ ಗಾಜಿನ ಹಿಂದೆ ನಿಂತವರನ್ನು ನಾವೂ ಕಂಡೆವು. ನಿವೃತ್ತಿಯ ವಯಸ್ಸು–ಮನಸ್ಸು ಎರಡನ್ನೂ ಲೆಕ್ಕಿಸದೆ, ಸುಕ್ಕಿನ ತ್ವಚೆಗೆ ಮೇಕಪ್, ಕೆನ್ನೆ, ತುಟಿಗೆ ವಿಪರೀತ ರಂಗು ಹಚ್ಚಿ ಈ ವಯಸ್ಸಿನಲ್ಲೂ ಹಿಂದೆಂದೋ ಆರಿಸಿಕೊಂಡ ಕಸುಬನ್ನು ಮಾಡುವ ಅನಿವಾರ್ಯತೆ ಇದೆಯೆಲ್ಲಾ ಎಂದು ಖಿನ್ನವಾಯಿತು.

ಫ್ಲಾರೆನ್ಸ್‌ನಲ್ಲಿ ಮೈಕೆಲ್ಯಾಂಜೆಲೊನ ಬತ್ತಲು ಶಿಲಾ ಪ್ರತಿಮೆಗಳನ್ನು ನೋಡಿದ್ದ ನಮಗೆ ಇವರು ಗೊಂಬೆಗಳೋ ಮನುಷ್ಯರೋ ಎಂಬ ಅನುಮಾನ ಬರುವಂತೆ ಇದ್ದರು. ಒಂದರ ಪಕ್ಕ ಒಂದು ಅಂಟಿಕೊಂಡಂತೆ ಇದ್ದ ಕಿಟಕಿ ವ್ಯಾಪಾರ ನಡೆಯುವ ಸೋಜಿಗವನ್ನು ಕಂಡು ವಿಸ್ಮಿತರಾದೆವು. ಮಧ್ಯವಯಸ್ಕ ಗಿರಾಕಿಯೊಬ್ಬ ಹಾದು ಹೋಗಲು, ಹೆಚ್ಚುಕಮ್ಮಿ ವಿವಸ್ತ್ರಳಾಗಿದ್ದ ಹೆಂಗಸೊಬ್ಬಳು ನಿಂತು ಆಮಂತ್ರಿಸಿದಳು. ಆತ ಬರುತ್ತಲೇ ಅವಳು ಕೆಂಪು ಪರದೆ ಹಿಂದೆ ಸರಿದು ಮಾತುಕತೆ, ವ್ಯಾಪಾರ ಆರಂಭಿಸಿದಳು. ಹಲವು ಕ್ಷಣಗಳ ನಂತರ ಆತ ಮೋಟು ಗೋಡೆಯ ಒಳಗೆ ಸರಿದು ಮರೆಯಾದ. ಅಲ್ಲಿ ಬೆಲೆಯೊಂದಿಗೆ ವಿವಿಧ ಸೇವೆಗಳ ಪಟ್ಟಿಯನ್ನೇ ಹಾಕಿರುತ್ತಾರೆ. ಗ್ರಾಹಕರು ತಮಗೆ ಬೇಕಾದ್ದನ್ನು ಮೊದಲೇ ಆರಿಸಿಕೊಂಡು ಒಳಗೆ ಹೋಗಬಹುದು.

ಇದಕ್ಕೊಂದು ಇತಿಹಾಸ, ಪರಂಪರೆ ಇದೆ. ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ತಲತಲಾಂತರದಿಂದ ಪಾಲಿಸಿಕೊಂಡು ಬಂದಿದ್ದಾರೆ. ಇದರಲ್ಲಿ ಯಾವ ಹಿಂಜರಿಕೆಯಾಗಲಿ, ಅವಮಾನ ಅನುಮಾನವಾಗಲಿ ಇಲ್ಲ. ಬಹಳ ಹಿಂದೆ, ಅಂದರೆ 18ನೇ ಶತಮಾನದಲ್ಲಿ, ಸಮುದ್ರದ ಮೂಲಕ ಪ್ರಯಾಣ ಮಾಡುವವರು ಈ ಕೊಲ್ಲಿಯಲ್ಲಿ ತಂಗಿದ್ದು ವಿಶ್ರಮಿಸಿ ಮುಂದಕ್ಕೆ ಪ್ರಯಾಣ ಬೆಳೆಸುತ್ತಿದ್ದರು. ಎರಡನೆಯ ಮಹಾಯುದ್ಧದ ಸಮಯದಲ್ಲೂ ಆಮ್‌ಸ್ಟರ್‌ಡ್ಯಾಂ, ಸೈನಿಕರ ವಿಶ್ರಾಂತಿ ತಾಣವಾಗಿದ್ದುದರಿಂದ ಅಲ್ಲಿ ವೇಶ್ಯಾವಾಟಿಕೆ ವೃತ್ತಿ ತಂತಾನಾಗೇ ಕುದುರಲು ಕೊಠಡಿಗಳನ್ನು ಕಟ್ಟಿ ಬಾಡಿಗೆಗೆ ಬಿಡಲಾಯಿತು. ಗೃಹಸ್ಥರಿಗೆ ಮತ್ತು ಪಾದ್ರಿಗಳಿಗೆ ಪ್ರವೇಶ ಇರಲಿಲ್ಲ. ಅಂದಿನಿಂದ ಇಂದಿನವರೆಗೂ ಅದೇ ಕಿಟಕಿ–ವ್ಯಾಪಾರದ ಪರಂಪರೆ ನಡೆದುಕೊಂಡು ಬಂದಿದೆ. ಹಣವಂತರು ಜೂಜು ಆಡಲು ಐಷಾರಾಮಿ ಪಬ್ ಬಾರ್‌ಗಳಿಗೆ ಬಂದಾಗ ಅವರಿಗೆ ಬೆಲೆವೆಣ್ಣುಗಳ ಅಗತ್ಯ ಇದ್ದುದರಿಂದ ಅಲ್ಲೂ ಸುಂದರ ಸುಖಾಸನಗಳಿರುವ ಸಿರಿವಂತ ಪರಿಸರದ 20–30 ಮೈಮಾರಾಟ ಮಾಳಿಗೆಯನ್ನು ತೆರೆಯಬೇಕಾಯಿತು.




ಕ್ಯಾನಬಿಸ್ ಮತ್ತು ಇತರೆ ಮಾದಕ ವಸ್ತುಗಳನ್ನು ಮಾರಲು ಪರವಾನಗಿ ಹೊಂದಿರುವ ಮಳಿಗೆಗಳು




ಕೆಂಪು ಪರದೆ ಕೊಠಡಿಗಳು

'ಡಿ ವಾಲ್ಲೆನ್' ಪ್ರವಾಸಿಗರ ಆಕರ್ಷಣೆ. ಇದಲ್ಲದೆ ಸಿಂಗಾಲ್ಜಿಬೈಡ್ (Singelgebied) ಮತ್ತು ರೈಸೇಡೆಲ್ಕೆಡ್ (Ruysdaelkade) ಕೆಂಪು ದೀಪದ ಬಡಾವಣೆಗಳೂ ಉಂಟು. ಯಾತ್ರಿಕರು ಅಧಿಕವಾಗಿ ಬರುವುದು ವಾರಾಂತ್ಯದಲ್ಲಿ. ಹಾಗಾಗಿ, ಗುರುವಾರದಿಂದ ಭಾನುವಾರದ ತನಕ ರಾತ್ರಿ 1 ಗಂಟೆಗೆ ರಸ್ತೆ ಬಂದ್ ಆಗುವುದು.

'ಡಿ ವಾಲ್ಲೆನ್'ನಲ್ಲಿ ಮಹಿಳೆಯರೇ ಅಲ್ಲದೆ ತೃತೀಯ ಲಿಂಗದವರೂ ಇದೇ ಕಸುಬನ್ನು ಹಿಡಿದಿರುತ್ತಾರೆ. ಗ್ರಾಹಕರು ವ್ಯತ್ಯಾಸ ತಿಳಿಯಲು ಬೇರೆ ಬಣ್ಣದ ದೀಪಗಳೇ ಪ್ರತೀಕ. ಕೆಂಪು ದೀಪ ಉರಿವ ಕಿಟಕಿಗಳು ಮಹಿಳೆಯರದ್ದು ಹಾಗೂ ನೀಲಿ ದೀಪದ ಬಲ್ಬ್‌ಗಳು ದ್ವಿಲಿಂಗೀಯ – ತೃತೀಯ ಲಿಂಗದವರಿಗೆ ಸೇರಿದ್ದು. ಇಲ್ಲಿ ನೀಲಿ ದೀಪಗಳು ಉರಿಯುತ್ತಿದ್ದರೂ

